ಕುಳಿತಂತಾಗಿ ಜಾಗಬಿಡುವ ಉದ್ದೇಶದಿಂದ ಸ್ವಲ್ಪ ಇತ್ತ ಸರಿದ. ಅದಕ್ಕೆ ಆ ವ್ಯಕ್ತಿ ಮೈ ತಾಗುವಷ್ಟು ಇವನತ್ತ ಸರಿದಾಗ ಅಸಹನೆಯಿಂದ ಅತ್ತ ತಿರುಗಿದರೆ ಅವಳು ಮಂಜರಿ!

'ಏನು, ಒಬ್ರೇ ಕುಳಿತು ಕನಸು ಕಾಣತಿದ್ರಾ? ನನ್ನ ಕನಸೇನಾ?...' ಮುಗುಳ್ನಕ್ಕಳು. ಆಘಾತದಿಂದಿನ್ನೂ ಹೊರಬಂದಿರಲಿಲ್ಲ, ಅವಳೇ 'ಸಂಜೆ ನಿಮ್ಮನೇಗೇ ಬರಬೇಕಂತಿದ್ದೆ, ಇಲ್ಲೆ ಸಿಕ್ರಿ...' ಸುತ್ತಮುತ್ತ ಹತ್ತಿರ ಯಾರೂ ತನ್ನ ಮಾತು ಕೇಳುತ್ತಿಲ್ಲ ಅಂತ ಖಾತ್ರಿ ಮಾಡಿಕೊಂಡು ಪಿಸುದನಿಯಲ್ಲಿ 'ನಾನು ನಿಮ್ಮನ್ನ ಮದ್ವೆಯಾಗಬೇಕೂಂತ ತೀರ್ಮಾನ ಮಾಡ್ಕೊಂಡಿದೀನಿ' ಅಂದಳು. ಗಾಬರಿ ಬಿದ್ದ ಪದ್ಮನಾಭ 'ಏ...ಇದೆಲ್ಲಾ ಹುಡ್ಗಾಟಿಕೆಗೆ ಆಡೋ ಮಾತಲ್ಲ...' ಅಂದ. 'ಹುಡ್ಗಾಟಿಕೆಗೆ ಅಲ್ಲಪ್ಪ, ನಮ್ಮನೆ ದೇವ್ರಾಣೆಗೂ ನಾ ನಿಮ್ಮನ್ನ ಮೆಚ್ಕೊಂಡಿದೀನಿ. ಇದನ್ನ ತಪ್ಸೋಕೆ ಯಾರಿಂದ್ಲೂ ಸಾಧ್ಯವಿಲ್ಲ' ಅವಳ ಮುಖ ನೋಡಿದವನಿಗೆ ಅದು ಹುಡುಗಾಟಿಕೆಯಲ್ಲ ಅಂತ ದೃಢವಾಯಿತು. ಅವಳು ಹಿಂದೆ ನಡೆದುಕೊಂಡ ರೀತಿಯಿಂದ ಅವಳ ನಿರ್ಧಾರ ತೆಗೆದುಕೊಳ್ಳೊ ಶಕ್ತಿಯ ಬಗ್ಗೆ ಸಂದೇಹವಿರಲಿಲ್ಲ. '...ನೋಡು ಮಂಜರೀ, ನಾನು ನೋಡಲು ಸುಂದರನಲ್ಲ. ತಲೆ ಆಗಲೆ ಬೋಳಾಗುತ್ತಿದೆ. ಹೊಟ್ಟೆ ಗುಂಡಾಗ್ತಿದೆ. ವಯಸ್ಸೂ... ನೀನು ಅಂಕಲ್ ಅಂತ ಕರೆಯೋ ಪ್ರಾಯ...' ತಟ್ಟನೆ ತಡೆದವಳು, 'ಹೌದು, ನಂದು ಇಪ್ಪತ್ತು. ಈ ಲೆಕ್ಕ ಬೇಡ ನಂಗೆ. ಇಬ್ರ ನಡುವೆ ಅಷ್ಟೆಲ್ಲಾ ನಡೆದ್ಮೇಲೆ ಈಗ ಅಂಕಲ್ಲೂ ಇಲ್ಲ ಪಿಂಕಲ್ಲೂ ಇಲ್ಲ. ರೀ... ಪದ್ಮನಾಭ, ನೀವಿನ್ನು ನಂಗೆ ಬರೀ 'ಏನ್ರೀ' ಅಷ್ಟೇ...' ಅಂದಳು. ಉತ್ತರ ಹೊಳೆಯದೆ, 'ಅಲ್ಲಾ... ಸರೀ ಯೋಚಿಸಿ ನಿರ್ಧಾರ ಬದಲ್ಸು. ಇಂತಾ ಪ್ರಸ್ತಾಪ ಎಲ್ಲಾ ಮಾಡೋದು ರಸ್ತೇಲಲ್ಲ' ಅಂದ. ಅವಳು ತುಂಟನಗೆ ಹೊಮ್ಮಿಸಿ 'ಮನೆಗೇ ಬರ್ತಿದ್ದೆ. ಆದರೆ ಅಲ್ಲಿ ಬರೀ ಪ್ರಸ್ತಾಪಕ್ಕೇ ನಿಲ್ಲೊಲ್ಲ' ಅಂದವಳು ಗಂಭೀರಳಾಗಿ 'ನೋಡಿ, ಇದು ಬ್ರಹ್ಮಲಿಖಿತ ಅನ್ಸುತ್ತೆ. ನಾಳಿದ್ದು ಹಾಡಹಗಲೇ ನಾನು ನಿಮ್ಮನೆಗೆ ಬರ್ತೀನಿ. ಜೊತೆಗೆ ನಮ್ಮ ಸೂಪರ್‌ವೈಸರು, ಗೆಳತಿಯರು ಇರ್ತಾರೆ. ಮನೇಲಿರಿ' ಅಂದಳು.

ಸಬ್‌ರಿಜಿಸ್ಟ್ರಾರ್ ಎದುರು ಮದುವೆ ಸರಳವಾಗಿ ಮುಗಿದು, ಕಮ್ಯುನಿಟಿ ಹಾಲ್‌ನಲ್ಲಿ ಕೆಲವೇ ಆಪ್ತರು ಸ್ನೇಹಿತರಿಗೆ ಊಟ ಹಾಕಿಸಿ ಆಶೀರ್ವಾದ ಪಡೆದರು. ಪದ್ಮನಾಭನ ಅದೇ ಒಂದು ಬೆಡ್‌ರೂಮಿನ ಮನೆಯಲ್ಲಿ ಗೃಹಪ್ರವೇಶ ಮಾಡಿ ಮಂಜರಿ ಒಳಬಂದಳು. ರಾತ್ರಿ ಇವರಿಬ್ಬರೇ. ಹಾಲು ತುಂಬಿದ ಗ್ಲಾಸು ಹಿಡಿದು ಮಲಗುವ ಕೋಣೆ ಪ್ರವೇಶಿಸುವಾಗ ಸುತ್ತ ನೋಡಿದ ಮಂಜರಿಯ ಹೆಜ್ಜೆ ಒಂದುಕ್ಷಣ ತಡೆಯಿತು. ಮುಖದ ಮೇಲೆ ನಾಚಿಕೆಯ ಪದರವೊಂದು ಇದ್ದೂ ಇಲ್ಲದಂತೆ ಎಲ್ಲಿಂದಲೊ ಅವತರಿಸಿತು. ನಿರಾತಂಕ ಸಂಭ್ರಮದಲ್ಲಿ ಪತ್ನಿಯನ್ನು ಬಳಸಿದ ಪದ್ಮನಾಭ 'ಹೌದೂ... ಹುಕ್ಕನ್ನ...' ಅಂದದ್ದಕ್ಕೆ – 'ನಂಗೊತ್ತಿಲ್ಲಪ್ಪಾ' ಅಂದಳು ಪಿಸುದನಿಯಲ್ಲಿ.

★★★

ಎಲ್ಲಾ ನಿಗೂಢವೆನಿಸುತ್ತಿತ್ತು ಅವನಿಗೆ. ಒಂದು ಕೊಂಡಿ ಇನ್ನೊಂದಕ್ಕೆ ಸಿಕ್ಕಿಕೊಳ್ಳುತ್ತ ಅವನನ್ನ ಎಲ್ಲಿಂದೆಲ್ಲಿಗೋ ಎಳೆತಂದಿತ್ತು. ಅಸಂಗತವೆನಿಸುವಷ್ಟು ತರ್ಕದ ಹೊರಗೆ ಘಟಿಸಿತ್ತು. ಮಂಜರಿಯ ಬಗ್ಗೆ ಎರಡು ಮಾತಿಲ್ಲ. ರುಚಿಯಾಗಿ ಆಸ್ಥೆಯಿಂದ ಅಡುಗೆ ಮಾಡುತ್ತಾಳೆ. ಅವನೆಲ್ಲ ಬೇಕು ಬೇಡಗಳು ಅವಳಿಗೆ ಅರಿವಿರುತ್ತಿತ್ತು. ಕೆಲಸಕ್ಕೆ ಹೋಗಿಬಂದೂ ಲವಲವಿಕೆಯಲ್ಲಿರುತ್ತಾಳೆ. ಸಂಸಾರವೆಂದರೆ ಹೀಗಿರುತ್ತಾ ಅಂತ ವಿಸ್ಮಯವಾಗುತ್ತಿತ್ತವನಿಗೆ. ಅವಳಿದ್ದಾಗ ಸಮಯ ಸರಿದದ್ದೇ ಗೊತ್ತಾಗುತ್ತಿರಲಿಲ್ಲ. ಒಬ್ಬನೇ ಇದ್ದಾಗ ಕಣ್ಣು ಆ ಕಿಟಕಿಯತ್ತ ಹೋಗುತ್ತಾ ಚಿತ್ರಗಳ ಅಲೆದಾಟ ಸುರುವಾಗುತ್ತಿತ್ತು. ಸಣ್ಣಸಣ್ಣ ಸಂದೇಹಗಳು ಹುಟ್ಟುತ್ತ ಕಿರಿಕಿರಿಗಿಟ್ಟುಕೊಳ್ಳುತ್ತಿತ್ತು. ಶಾಲೆಗೆ ದಸರಾ ರಜೆ ಬಂತು. ಮಂಜರಿ ಕೆಲಸಕ್ಕೆ ಹೋದಾಗ ಒಬ್ಬನೇ ಮನೆಯಲ್ಲಿರುತ್ತಿದ್ದ. ಸುತ್ತಮುತ್ತ